ಮತ್ತು ಲೇಖಕರು ಇಲ್ಲ. ಯಾವುದೇ ಫಲಾಪೇಕ್ಷೆಯಿಲ್ಲದೆ ಕೇವಲ ಸಾಹಿತ್ಯದ ಮೇಲಿನ ಪ್ರೀತಿ–ಆಸಕ್ತಿಗಳಿಂದ ಸಾಹಿತ್ಯವನ್ನು ಓದುವ ಒಂದು ದೊಡ್ಡ ಲೋಕವೇ ಇದೆ. ಅವರಲ್ಲಿ ಹಲವು ಬಗೆಯ ವೃತ್ತಿ–ಉದ್ಯಮಗಳಲ್ಲಿ ತೊಡಗಿಕೊಂಡವರಿದ್ದಾರೆ. ಎಲ್ಲ ಜಾತಿ–ವರ್ಗಗಳಿಗೆ ಸೇರಿದವರಿದ್ದಾರೆ. ಇತರ ಸಾಹಿತ್ಯ ಪ್ರಕಾರಗಳನ್ನು, ಸಾಹಿತ್ಯವಲ್ಲದ ಇತರ ಹಲವು ವಿಷಯಗಳನ್ನು ಓದುವಂತೆ ಅವರು ಸಾಹಿತ್ಯ ವಿಮರ್ಶೆಯನ್ನೂ ಓದುತ್ತಾರೆ. ತಮ್ಮ ಓದಿನ ಅನುಭವವನ್ನು ಇತರರ ಓದಿನ ಅನುಭವಗಳೊಂದಿಗೆ ತಾಳೆ ಹಾಕಿಕೊಳ್ಳಲು, ತಮಗೆ ಹೊಳೆಯದೇ ಹೋದ ಸಂಗತಿಗಳು ಇತರರ ವಿಮರ್ಶೆಯಲ್ಲಿ ಹೊಳೆಯಬಹುದೆಂಬ ಕಾರಣಕ್ಕಾಗಿ ಅಥವಾ ಕೃತಿಪ್ರವೇಶಕ್ಕೆ ಹೊಸಹೊಸ ದಾರಿಗಳನ್ನು ಅನ್ವೇಷಿಸಿಕೊಳ್ಳಲು ಓದುತ್ತಾರೆ. ಅಂತಿಮವಾಗಿ ವಿಮರ್ಶೆಯ ಉದ್ದೇಶವೂ ಅದೇ ಅಲ್ಲವೆ? ಹಾಗಾಗಿ ಲೇಖಕರನ್ನು ಗಮನದಲ್ಲಿಟ್ಟುಕೊಂಡು ನಾನು ವಿಮರ್ಶೆಯನ್ನು ಬರೆಯುವುದಿಲ್ಲ. ಲೇಖಕರೊಂದಿಗೆ ನಾನು ಅವರ ಕೃತಿಗಳನ್ನೂ ಬೇರೆಯವರ ಕೃತಿಗಳನ್ನೂ ಚರ್ಚಿಸಬಹುದು, ವಿಚಾರವಿನಿಮಯ ಮಾಡಿಕೊಳ್ಳಬಹುದು, ಅನುಭವಗಳನ್ನು ಹಂಚಿಕೊಳ್ಳಬಹುದು. ಆದರೆ ಅದು ಓರ್ವ ಓದುಗನಾಗಿ ಮತ್ತು ಅವರನ್ನೂ ಓದುಗರೆಂದು ಭಾವಿಸಿ. ಸಾಹಿತ್ಯ ಪ್ರಪಂಚದಲ್ಲಿ ಇರುವ ಎಲ್ಲ ಲೇಖಕರ ಬಗ್ಗೆ, ಎಲ್ಲ ಪುಸ್ತಕಗಳ ಬಗ್ಗೆ ಬರೆಯಲೂ ಭೌತಿಕವಾಗಿ ಯಾರಿಂದಲೂ ಸಾಧ್ಯವಿಲ್ಲ. ಇಡೀ ಜೀವಮಾನವನ್ನು ಕೇವಲ ಸಾಹಿತ್ಯಕೃತಿಗಳ ಓದಿಗೇ ಮೀಸಲಿಟ್ಟರೂ ಸಾಧ್ಯವಿಲ್ಲ. ಓರ್ವ ವಿಮರ್ಶಕನಿಗೂ ಸಾಹಿತ್ಯದಂತೆ ಜೀವನದ ಇತರ ಆದ್ಯತೆಗಳೂ ಇರುತ್ತವೆಯಷ್ಟೆ. ತನ್ನ ಕಾಲದ ಮಿತಿಯಲ್ಲಿ, ಅಭಿರುಚಿಯ ಮಿತಿಯಲ್ಲಿ, ಅಭ್ಯಾಸದ ಮಿತಿಯಲ್ಲಿ ಅವನು ಬರೆಯುತ್ತಿರುತ್ತಾನೆ. ಅಲ್ಲದೆ ತಮ್ಮ ಕೃತಿಗಳ ಬಗ್ಗೆ ಪ್ರತಿಕ್ರಿಯೆ–ಪ್ರತಿಸ್ಪಂದನೆಗಳನ್ನು ಪಡೆಯಲು ಕೆಲವೇ ಕೆಲವು ವಿಮರ್ಶಕರತ್ತ ಯುವ ಲೇಖಕರು ನೋಡಬೇಕಾದ ಅಗತ್ಯವಿಲ್ಲ. ಪುಸ್ತಕ ಓದುವವರು ತಮ್ಮ ಅಭಿಪ್ರಾಯ–ಅನ್ನಿಸಿಕೆಗಳನ್ನು ಹಂಚಿಕೊಳ್ಳಲು ಇವತ್ತು ಹಲವು ವೇದಿಕೆಗಳಿವೆ. ಪ್ರಿಂಟ್ ಮೀಡಿಯಾಕ್ಕಿಂತ ಹೆಚ್ಚು ವಿಶಾಲವಾದ, ಎಲ್ಲರಿಗೂ ಎಟುಕುವ ಹಲವು ವೇದಿಕೆಗಳಿವೆ. ಯಾರೋ ವಿಮರ್ಶಕರು ತಮ್ಮ ಬಗ್ಗೆ ಯಾವುದೋ ಪತ್ರಿಕೆಯಲ್ಲಿ ಬರೆಯಲಿಲ್ಲ ಎಂದು ಕೊರಗುವ, ಗೊಣಗುವ ಬದಲು ತಮ್ಮ ಓದುಗರ ದನಿಗಳನ್ನು ಕೇಳುವ ವ್ಯವಧಾನವನ್ನು ನಮ್ಮ ಯುವ ಲೇಖಕರು ತೋರಬೇಕಾಗಿದೆ.


### ಟಿ.ಪಿ. ಅಶೋಕ

ಕನ್ನಡದ ಮುಖ್ಯ ವಿಮರ್ಶಕ ಅಶೋಕರು ಸಾಹಿತ್ಯ ವಿಮರ್ಶೆಯ ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯ, ರಂಗಭೂಮಿ, ಸಿನಿಮಾದ ಅಧ್ಯಾಪನಗಳಲ್ಲಿ ತೊಡಗಿಸಿಕೊಂಡಿದ್ದಾರೆ. 'ಸಾಹಿತ್ಯ ಸಂಪರ್ಕ', 'ಸಾಹಿತ್ಯ ಸಂದರ್ಭ', 'ಸಾಹಿತ್ಯ ಸಂಬಂಧ', 'ಸಾಹಿತ್ಯ ಸಂಚಾರ', 'ಪುಸ್ತಕ ಪ್ರೀತಿ', 'ಕಥನ ಪ್ರೀತಿ', 'ಕಥನ ಕಾರಣ', 'ಕಥನ ಭಾರತಿ' ಅವರ ಕೆಲವು ಪುಸ್ತಕಗಳಾಗಿವೆ. ಯು.ಆರ್. ಅನಂತಮೂರ್ತಿ, ವೈದೇಹಿ, ತೇಜಸ್ವಿ, ಮಾಸ್ತಿ ಅವರ ಸಾಹಿತ್ಯ ಕುರಿತು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಸಾಗರದಲ್ಲಿ ನೆಲೆಸಿದ್ದಾರೆ.